**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1030/2023**

**ಸಾಕ್ಷಿಃ ಸಿ.ಡಬ್ಲ್ಯೂಃ 01, ಪಿ.ಡಬ್ಲ್ಯೂಃ 01**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಧರ ನಾಯ್ಕ |
| ತಂದೆಯ ಹೆಸರು | : | ಪರಮೇಶ ನಾಯ್ಕ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಪೊಲೀಸ್ ಉಪ ನಿರೀಕ್ಷಕರು, ಹರಿಹರಪುರ ಪೊಲೀಸ ಠಾಣೆ, ಚಿಕ್ಕಮಗಳೂರು. |
| ವಾಸ್ತವ್ಯ | : | ಇಲಾಖಾ ವಸತಿ ಗೃಹ, ಹರಿಹರಪುರ, ಚಿಕ್ಕಮಗಳೂರು. |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 28-10-2025**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಗ್ರಾಮೀಣ ಪೋಲೀಸ್ ಠಾಣೆಯಲ್ಲಿ ಜನವರಿ 2023 ರಿಂದ ಜನವರಿ 2024 ರವರೆಗೆ ಪೋಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 14-06-2023 ರಂದು ನಾನು ರಾತ್ರಿ ಗಸ್ತಿನಲ್ಲಿದ್ದಾಗ, ಬಾತ್ಮಿದಾರರು ನನಗೆ ಕರೆ ಮಾಡಿ, ಚೌಥನಿ ಕಡೆಯಿಂದ ತೆಂಗಿನಗುಂಡಿ ಕಡೆಗೆ ಇಬ್ರಾಹಿಂ ಕಲೀಲ್ ಎಂಬುವವನು ತಮ್ಮ ಟಾಟಾ ಏಸ್ ವಾಹನದಲ್ಲಿ ಜಾನುವಾರುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದಾರೆ ಎಂದು ಮಾಹಿತಿ ನೀಡಿರುತ್ತಾರೆ. ಸದ್ರಿ ಮಾಹಿತಿಯ ಆಧಾರದಲ್ಲಿ ದಿನಾಂಕಃ 15-06-2023 ರ ಬೆಳಗ್ಗಿನ ಜಾವ 4.00 ಗಂಟೆಗೆ ರಾತ್ರಿ ಗಸ್ತು ಸಿಬ್ಬಂದಿಯಾದ ಚಾಸಾ-4 ಮತ್ತು 5 ರವರಿಗೆ ತೆಂಗಿನಗುಂಡಿಯ ಹತ್ತಿರ ಬರುವಂತೆ ನಾನು ತಿಳಿಸಿರುತ್ತೇನೆ. ನಂತರ ಬೆಳಗ್ಗಿನ ಜಾವ 4.30 ಗಂಟೆಗೆ ನಾನು ತೆಂಗಿನಗುಂಡಿಯ ಹತ್ತಿರ ತಲುಪಿರುತ್ತೇನೆ. ನಂತರ ತೆಂಗಿನಗುಂಡಿ ಕಡೆಗೆ ಬರುತ್ತಿದ್ದ ವಾಹನಗಳನ್ನು ತಪಾಸಣೆ ಮಾಡುತ್ತಿದ್ದೆನು. ಹಾಗೆ ವಾಹನಗಳನ್ನು ತಪಾಸಣೆ ಮಾಡುವಾಗ ಪಂಚ ಸಾಕ್ಷಿಗಳಾಗಿ ನಮ್ಮ ಜೊತೆ ಹಾಜರಿರುವಂತೆ ಸ್ಥಳದಲ್ಲೇ ಸಿಕ್ಕ ಚಾಸಾ-2 ಮತ್ತು 3 ರವರಿಗೆ ನೋಟೀಸು ನೀಡಿರುತ್ತೇನೆ. ಸಾಕ್ಷಿಯು ಸದ್ರಿ ನೋಟೀಸಿನ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಬೆಳಗ್ಗೆ 5.30 ಗಂಟೆಗೆ ಭಟ್ಕಳ-ಚೌಥನಿ ಮಾರ್ಗವಾಗಿ ತೆಂಗಿನಗುಂಡಿ ಕಡೆಗೆ ಬೂದು ಬಣ್ಣದ ಟಾಟಾ ಏಸ್ ಗೂಡ್ಸ ವಾಹನ

ಬಂದಿದ್ದು, ಅದನ್ನು ನಿಲ್ಲಿಸಲು ಪ್ರಯತ್ನಿಸಿದಾಗ, ಅದರ ಚಾಲಕನಾದ ಈಗ ನ್ಯಾಯಾಲಯದ ಮುಂದೆ ಹಾಜರಿರುವ 1ನೇ ಆರೋಪಿಯು ವಾಹನವನ್ನು ಹಿಮ್ಮುಖವಾಗಿ ಚಲಾಯಿಸಿ ನಂತರ ನಿಲ್ಲಿಸಿರುತ್ತಾನೆ. ಸದ್ರಿ ವಾಹನದಲ್ಲಿ ಈಗ ನ್ಯಾಯಾಲಯದ ಮುಂದೆ ಹಾಜರಿರುವ 2ನೇ ಆರೋಪಿಯು ಸಹ ಇದ್ದನು. ಅವರಿಬ್ಬರೂ ಸಹ ವಾಹನ ನಿಲ್ಲಿಸಿ ಓಡಿ ಹೋಗಲು ಪ್ರಯತ್ನಿಸಿರುತ್ತಾರೆ. ಆಗ ನನ್ನ ಸಿಬ್ಬಂದಿಗಳು ಅವರಿಬ್ಬರನ್ನು ಹಿಡಿದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ಆರೋಪಿಗಳ ಹೆಸರು, ವಿಳಾಸ ಕೇಳಿರುತ್ತೇನೆ. ನಂತರ ವಾಹನವನ್ನು ಪರಿಶೀಲಿಸಿದಾಗ, ಅದರ ಸಂಖ್ಯೆ ಕೆಎ/17–ಸಿ 6813 ಇರುವುದು ಕಂಡುಬಂದಿರುತ್ತದೆ. ನಂತರ ಪಂಚರ ಸಮಕ್ಷಮ ವಾಹನದ ಒಳಗೆ ಪರಿಶೀಲಿಸಿದಾಗ ತಿಳಿ ಕಪ್ಪು ಬಣ್ಣದ ಎರಡು ಕೋಣಗಳು ಇದ್ದವು. ಅವುಗಳ ಬಗ್ಗೆ ಆರೋಪಿತರ ಬಳಿ ವಿಚಾರಿಸಿದಾಗ, ಸದ್ರಿಯವರು ಯಾವುದೇ ಪರವಾನಿಗೆ ಇರುವುದಿಲ್ಲ, ಕೋಣಗಳನ್ನು ಚೌಥನಿಯ ಅಪರಿಚಿತ ವ್ಯಕ್ತಿಯಿಂದ ಐವತ್ತು ಸಾವಿರ ರೂಪಾಯಿಗಳಿಗೆ ಅವುಗಳನ್ನು ಖರೀದಿಸಿರುವುದಾಗಿ ತಿಳಿಸಿ, ಸದ್ರಿ ಕೋಣಗಳನ್ನು ಮುಂಬರುವ ಬಕ್ರೀದ್ ಹಬ್ಬಕ್ಕೆ ವಧೆ ಮಾಡಲು ತಂದಿರುವುದಾಗಿ ತಿಳಿಸಿರುತ್ತಾರೆ. ನಂತರ ವಾಹನವನ್ನು ಮತ್ತು ಅದರಲ್ಲಿದ್ದ ಎರಡು ಕೋಣಗಳನ್ನು ಹಾಗೂ ಆರೋಪಿಗಳನ್ನು ಪಂಚರ ಸಮಕ್ಷಮ ನನ್ನ ವಶಕ್ಕೆ ಪಡೆದು ಬೆಳಿಗ್ಗೆ 5.45 ರಿಂದ 6.45 ರವರೆಗೆ ಪಂಚನಾಮೆಯನ್ನು ಬರೆದು, ನಂತರ ಸ್ಥಳದಲ್ಲಿ ಪೋಟೋ ತೆಗೆದಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಎಂದು, ಅದಲಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–3 ಮತ್ತು 4 ಎಂದು ಗುರುತಿಸಲಾಯಿತು. ನಂತರ ಜಪ್ತುಪಡಿಸಿದ ವಾಹನವನ್ನು ಮತ್ತು ಅದರಲ್ಲಿದ್ದ ಎರಡು ಕೋಣಗಳನ್ನು ಹಾಗೂ ಆರೋಪಿಗಳನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ. ಠಾಣೆಗೆ 7.00 ಗಂಟೆಗೆ ತಲುಪಿರುತ್ತೇವೆ. ನಂತರ ಠಾಣೆಯಲ್ಲಿ ದೂರನ್ನು ತಯಾರಿಸಿ, ಚಾಸಾ–9 ರವರಿಗೆ ನೀಡಿರುತ್ತೇನೆ. ಹಾಗೆ ಜಪ್ತುಪಡಿಸಿದ ವಾಹನವನ್ನು ಮತ್ತು ಎರಡು ಕೋಣಗಳನ್ನು ಹಾಗೂ ಆರೋಪಿಗಳನ್ನು ಚಾಸಾ–9 ರವರ ವಶಕ್ಕೆ ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್.ಇ.ಹೆಚ್. ವಕೀಲರಿಂದ,**

3. ನಾನು ಈ ಪ್ರಕರಣದಲ್ಲಿ ದೂರುದಾರರು ಮತ್ತು ಭಾಗಶಃ ತನಿಖಾಧಿಕಾರಿ ಎಂದರೆ , ಸಾಕ್ಷಿಯು ನಾನು ದೂರುದಾರನಾಗಿರುತ್ತೇನೆ ಆದರೆ ತನಿಖಾಧಿಕಾರಿಯಾಗಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ನಿಪಿ.2 ಪಂಚನಾಮೆಯನ್ನು ತಯಾರಿಸಿ ಭಾಗಶಃ ತನಿಖಾಧಿಕಾರಿಯಾಗಿ ಕೆಲಸ

ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯಾದ ನಂತರ ದೂರು ಮತ್ತು ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿರುವ ಪ್ರತ್ಯೇಕ್ಷ ಸಾಕ್ಷಿದಾರರಾದ ಚಾಸಾ 4 ರಿಂದ 6 ರವರು ನನ್ನ ಆಗಿನ ಅಧೀನ ಸಿಬ್ಬಂದಿಗಳು ಎಂದರೆ ಸರಿ. ನಾನು ಹೇಳುವಂತಹ ದಾಳಿಗೆ ನನ್ನ ಸಿಬ್ಬಂದಿಗಳನ್ನು ಹೊರತುಪಡಿಸಿ ದಾಳಿ ಕಾಲಕ್ಕೆ ಸ್ವತಂತ್ರ್ಯ ಪ್ರತ್ಯೇಕ್ಷ ಸಾಕ್ಷಿದಾರರು ಬೇರೆ ಯಾರು ಇರುವುದಿಲ್ಲ. ಚಾಸಾ 4 ರಿಂದ 6 ರವರು ಮತ್ತು ನಾನು ತೆಂಗಿನಗುಂಡಿಯ ಬಳಿ ಗಸ್ತು ಕರ್ತವ್ಯದಲ್ಲಿ ಇದ್ದ ಬಗ್ಗೆ ಠಾಣೆಯಲ್ಲಿ ದಾಖಲಾತಿ ಇರುತ್ತದೆ. ಸ್ದ್ರಿ ದಾಖಲಾತಿಗಳನ್ನು ನಾನು ತನಿಖಾಧಿಕಾರಿಗೆ ನೀಡಿರುವುದಿಲ್ಲ ಅದು ಠಾಣೆಯಲ್ಲೆ ಇರುತ್ತದೆ.

4. ಗುನ್ನಾ ಸ್ಥಳದ ಅಕ್ಕ-ಪಕ್ಕ ದಲ್ಲಿ ವಾಸ್ತವ್ಯದ ಮನೆಗಳು ಸ್ವಲ್ಪ ದೂರದಲ್ಲಿ ಇರುತ್ತದೆ. ಹಾಗೆ ಗುನ್ನಾ ಸ್ಥಳದ ಅಕ್ಕ-ಪಕ್ಕದಲ್ಲಿ ಅಂಗಡಿಗಳು ಇರುತ್ತದೆ. ತೆಂಗಿನಗುಂಡಿ ರಸ್ತೆಯು ತುಂಬ ವಾಹನ ಸಂಚಾರ ಇರುವ ರಸ್ತೆ ಎಂದರೆ ಸಾಕ್ಷಿಯು ಸ್ವಲ್ಪ ವಾಹನ ಸಂಚಾರ ಇರುವ ರಸ್ತೆ ಎಂದು ಉತ್ತರಿಸುತ್ತಾರೆ. ಪಂಚ ಸಾಕ್ಷಿಗಳನ್ನು ಸ್ಥಳಕ್ಕೆ ಕರೆಸಿರುತ್ತೇವೆ. ಅವರನ್ನು ನಾನೇ ಕರೆಸಿರುತ್ತೇನೆ. ಪಂಚರು ನನ್ನ ಪರಿಚಯಸ್ಥರು ಆಗಿದ್ದರು. ಚಾಸಾ 2 ರವರು ಮೂಡು ಶಿರಾಲಿಯವರು ಆಗಿರುತ್ತಾರೆ ಎಂದರೆ ಇರಬಹುದು. ಪಂಚನಾಮೆಯಲ್ಲಿ ಚಾಸಾ 2 ರವರ ವಿಳಾಸವನ್ನು ಚಾಸಾ 2 ರವರು ಹೇಳಿದಂತೆ ಬರೆದಿರುತ್ತೇನೆ. ಗುನ್ನಾ ಸ್ಥಳದಿಂದ ಮೂಡು ಶಿರಾಲಿಯು 3-4 ಕಿಲೋಮಿಟರ್ ದೂರದಲ್ಲಿರುತ್ತದೆ. ಚಾಸಾ 3 ರವರು ಅಳ್ವೆಕೋಡಿಯವರು ಆಗಿರುತ್ತಾರೆ ಎಂದರೆ ಇರಬಹುದು. ಪಂಚನಾಮೆಯಲ್ಲಿ ಚಾಸಾ 3 ರವರ ವಿಳಾಸವನ್ನು ಚಾಸಾ 3 ರವರು ಹೇಳಿದಂತೆ ಬರೆದಿರುತ್ತೇನೆ. ಗುನ್ನಾ ಸ್ಥಳದಿಂದ ಅಳ್ವೆಕೋಡಿಯು 5 ಕಿಲೋಮಿಟರ್ ದೂರದಲ್ಲಿರುತ್ತದೆ. ಪಂಚಸಾಕ್ಷಿಗಳಿಗೆ ನೋಟಿಸನ್ನು ಸ್ಥಳದಲ್ಲೆ ತಯಾರಿಸಿ ನೀಡಿರುತ್ತೇವೆ. ಅವರಿಬ್ಬರಿಗೂ ಒಂದೇ ನೋಟಿಸು ನೀಡಿರುತ್ತೇವೆ.

5. ನಿಪಿ.3 ಮತ್ತು 4 ಫೋಟೋಗಳಲ್ಲಿ ನಾನು ಹೇಳುವಂತೆ ದಾಳಿಯ ಕಾಲಕ್ಕೆ ನನ್ನ ಜೊತೆಗಿದ್ದ ನನ್ನ ಸಿಬ್ಬಂದಿಗಳು ಕಂಡುಬರುವುದಿಲ್ಲ ಎಂದರೆ ಹೌದು. ನಿಪಿ.3 ಮತ್ತು 4 ರಲ್ಲಿ ನಾವು ನಿಂತ ಸ್ಥಳದ ಹತ್ತಿರದಲ್ಲಿ ವಾಸದ ಮನೆ ಇರುತ್ತದೆ ಎಂದರೆ ಇರಬಹುದು. ನಾನು ಒಂದು ವರ್ಷಗಳ ಅವಧಿಯವರೆಗೆ ಭಟ್ಕಳದಲ್ಲಿ ಕರ್ತವ್ಯ ಮಾಡಿರುತ್ತೇನೆ. ಈ ಪ್ರಕರಣದಲ್ಲಿ ಸಾಧಿಸುತ್ತಿರುವಂತಹ ಎರಡು ಕೋಣಗಳು ಕಾಣೆಯಾದ ಬಗ್ಗೆ ನನ್ನ ಕರ್ತವ್ಯದ ಅವಧಿಯಲ್ಲಿ ನಮ್ಮ ಠಾಣೆಗೆ ದೂರು ಬಂದಿರಲಿಲ್ಲ. ಗುನ್ನಾ ಸ್ಥಳವು ಸ್ಟೀಲ್ ಮಾರ್ಟ್ ನ ಪಕ್ಕದಲ್ಲಿ ಇತ್ತು. ಸ್ಟೀಲ್ ಮಾರ್ಟ್ ಕಟ್ಟಡದಿಂದ ತೆಂಗಿನಗುಂಡಿ ಬಂದರ್ ರಸ್ತೆಯು 300-500 ಮಿಟರ್ ದೂರದಲ್ಲಿ ಇರಬಹುದು. ನಾನು ಹೇಳುವಂತಹ ದಾಳಿಯ ಕಾಲಕ್ಕೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಾಹನದ ಮಾಲೀಕರು ಯಾರು ಎಂಬ ಬಗ್ಗೆ ವಾಹನದ ದಾಖಲಾತಿಗಳನ್ನು

ಪರಿಶೀಲಿಸಿರುವುದಿಲ್ಲ. ಅದೇ ರೀತಿ ಯಾವ ವ್ಯಕ್ತಿಯಿಂದ ನಾನು ಸಾಧಿಸುತ್ತಿರುವಂತಹ ಕೋಣಗಳನ್ನು ಖರೀದಿ ಮಾಡಿದ್ದರು ಎಂದು ಪರಿಶೀಲನೇ ಮಾಡಿರುವುದಿಲ್ಲ. ಪಂಚನಾಮೆಯನ್ನು ನನ್ನ ಮಾಹಿತಿ ಆಧಾರದಲ್ಲಿ ಬರೆದಿರುತ್ತೇನೆ. ನಿಪಿ.3 ಮತ್ತು 4 ಫೋಟೋಗಳನ್ನು ಚಾಸಾ 6 ರವರು ತೆಗೆದಿರುತ್ತಾರೆ. ಸದ್ರಿ ಫೋಟೋಗಳನ್ನು ನಾನು ತನಿಖಾಧಿಕಾರಿಗೆ ನೀಡಿರುತ್ತೇನೆ. ಸದ್ರಿ ಫೋಟೋಗಳನ್ನು ನನ್ನ ಮೊಬೈಲ್ ನಿಂದ ಚಾಸಾ 6 ರವರು ತೆಗೆದಿರುತ್ತಾರೆ. ಫೋಟೋಗಳನ್ನು ಸ್ಟೊಡೀಯೊದಲ್ಲಿ ಪ್ರಿಂಟ್ ಮಾಡಿಸಿರುತ್ತೇವೆ. ಯಾವ ಸ್ಟೊಡೀಯೊದಲ್ಲಿ ಪ್ರಿಂಟ್ ಮಾಡಿಸಿದ್ದೇನೆ ಎಂದು ಈಗ ನೆನಪಿಲ್ಲ . ಆ ರೀತಿ ನಾನೇ ಪ್ರಿಂಟ್ ಹಾಕಿಸಿರುತ್ತೇನೆ. ಫೋಟೋಗಳನ್ನು ಪ್ರಿಂಟ್ ಹಾಕಿಸಿದ ಬಗ್ಗೆ ಹಣ ಪಾವತಿ ಮಾಡಿರುತ್ತೇನೆ. ಆದರೆ ಹಣ ಪಾವತಿ ರಸೀದಿಯನ್ನು ಸ್ಟೊಡೀಯೊದವರು ನನಗೆ ನೀಡಿರುವುದಿಲ್ಲ. ದಿ.15.06.2023 ರಂದು ನಾನು ಗಸ್ತು ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರಿಂದ 6 ರವರು ಸಹ ಆ ದಿನ ಗಸ್ತು ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸಾಧಿಸುತ್ತಿರುವಂತಹ ದಾಳಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಹಾಗೆ ಈ ಪ್ರಕರಣದಲ್ಲಿ ಸಾಧಿಸುತ್ತಿರುವ ಎರಡು ಕೋಣಗಳಿಗೆ ಮತ್ತು ಟಾಟಾ ಎಸ್ ವಾಹನಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿಅಂಶಗಳಿಗೋಸ್ಕರ ನಾನು ನನಗೆ ಪರಿಚಯ ಇರುವ ಸಾಕ್ಷಿದಾರರನ್ನು ಮತ್ತು ನನ್ನ ಅಧೀನ ಸಿಬ್ಬಂದಿಗಳನ್ನು ಬಳಸಿ ಸುಳ್ಳು ಪ್ರಕರಣವನ್ನು ಸೃಷ್ಠಿಸಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸೃಷ್ಠಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**